"ಮಧುರ ಮಕ್ಕಳೇ - ತಲೆಯ ಮೇಲೆ ವಿಕರ್ಮದ ಹೊರೆ ಬಹಳ ಇದೆ, ಆದ್ದರಿಂದ ಶರೀರಕ್ಕೆ ಖಾಯಿಲೆ ಬರುತ್ತಲೇ ಇರುತ್ತದೆ, ಕರ್ಮಾತೀತರು ಆದಾಗ ಕರ್ಮಭೋಗ ಸಮಾಪ್ತಿ ಆಗುತ್ತದೆ"

ಪ್ರಶ್ನೆ: ಎಲ್ಲರ ಗಮನ ಸೆಳೆಯಲು ಈ ವಿಶ್ವ ವಿದ್ಯಾಲಯಕ್ಕೆ ಯಾವ ಹೆಸರು ಇಡಬೇಕಾಗಿದೆ?

ಉತ್ತರ: ಸತ್ಯ-ಸತ್ಯ ಜ್ಞಾನ ವಿಜ್ಞಾನ ಭವನ ಅಥವಾ ಪಾಂಡವ ಭವನ. ನೀವು ಮಕ್ಕಳು 21 ಜನ್ಮಗಳಿಗೆ ಜ್ಞಾನ ಅರ್ಥಾತ್ ನಾಲೆಜ್ನಿಂದ ಸಂಪತ್ತು ಹಾಗೂ ವಿಜ್ಞಾನ ಅರ್ಥಾತ್ ಯೋಗದಿಂದ ಆರೋಗ್ಯ ಸಿಗುತ್ತದೆ. ಆದ್ದರಿಂದ ಈಗ ನಾವು ಮಕ್ಕಳು ಮನುಷ್ಯರಿಗೆ ಮುಕ್ತಿ-ಜೀವನ್ಮುಕ್ತಿ ಕೊಡಿಸುವ ಸಲುವಾಗಿ ಜ್ಞಾನ-ವಿಜ್ಞಾನದ ಪ್ರದರ್ಶನಗಳನ್ನು ಇಡಬೇಕು. ಎಲ್ಲರ ಆಕರ್ಷಣೆ ಜ್ಞಾನ-ವಿಜ್ಞಾನ ಭವನ ಹೆಸರಿನ ಮೇಲೆ ಹೋಗುತ್ತದೆ.

ಗೀತೆ: ನಮ್ಮ ತೀರ್ಥ ಯಾತ್ರೆ ಭಿನ್ನವಾಗಿದೆ............

ಓಂ ಶಾಂತಿ. ನಾಲ್ಕು ದಿಕ್ಕುಗಳನ್ನು ಸುತ್ತಿದೆ...... ಈ ಗೀತೆಯಲ್ಲಿ ಒಂದು ಸಾಲು ಬರುತ್ತದೆ. ಮನುಷ್ಯರು ನಾಲ್ಕು ದಿಕ್ಕುಗಳಲ್ಲಿನ ತೀರ್ಥ ಸ್ಥಾನವನ್ನು ಸುತ್ತಿ ಬರುತ್ತಾರೆ. ಈಗ ಅವರು ತೀರ್ಥ ಯಾತ್ರೆಗಳನ್ನು ಸುತ್ತಿಕೊಂಡು ಏಕೆ ಬರುತ್ತಾರೆ. (ಇದು ಸತ್ಯ ತ್ರೇತಾ.... ಸೃಷ್ಟಿ ಚಕ್ರವನ್ನು ಸುತ್ತಿ ಬರುವುದಾಗಿದೆ). ತಂದೆಯ ನೆನಪು ಹಾಗು ಸೃಷ್ಟಿಚಕ್ರವನ್ನು ಎಷ್ಟು ತಿರುಗಿಸುತ್ತೀರಿ, ಅಷ್ಟು ವಿಕರ್ಮ ವಿನಾಶವಾಗುತ್ತದೆ. ಶಿವಬಾಬಾರವರನ್ನು ಬಹಳ ನೆನಪು ಮಾಡಬೇಕು. ಏಕೆಂದರೆ ತಲೆಯ ಮೇಲೆ ವಿಕರ್ಮದ ಹೊರೆ ಬಹಳ ಇದೆ. ಈ ಶಾರೀರಿಕ ಅನಾರೋಗ್ಯವು ಅಂತ್ಯದವರೆಗೆ ಇರುತ್ತದೆ. ಎಲ್ಲಿಯವರೆಗೂ ಕರ್ಮಾತೀತ ಅವಸ್ಥೆ ತಲುಪುವುದಿಲ್ಲವೋ ಅಲ್ಲಿಯವರೆಗೂ ಒಂದಲ್ಲಾ ಒಂದು ದುಃಖ ಬರುತ್ತದೆ, ಇದು ಕರ್ಮಭೋಗದ ಚಿಹ್ನೆಯಾಗಿದೆ. ನಂತರ ಇದೆಲ್ಲವೂ ಅಂತ್ಯದವೇಳೆಗೆ ಸಮಾಪ್ತಿ ಆಗಿ ಬಿಡುತ್ತದೆ. ನಮಗೆ ಈಗ ಮುಖ್ಯವಾದುದು ಜ್ಞಾನ ಹಾಗು ಯೋಗ. ದೆಹಲಿಯಲ್ಲಿ ವಿಜ್ಞಾನ ಭವನವಿದೆ, ಆದರೆ ಸತ್ಯ-ಸತ್ಯವಾದ ಜ್ಞಾನ ವಿಜ್ಞಾನ ಭವನ ಇದೇ ಆಗಿದೆ. ಜ್ಞಾನವೆಂದರೆ ನಾಲೆಜ್ ಅರ್ಥಾತ್ ಜೀವನ್ಮುಕ್ತಿ, ವಿಜ್ಞಾನ ಅರ್ಥಾತ್ ಮುಕ್ತಿಯಾಗಿದೆ. ವಿಜ್ಞಾನವೆಂದು ಯೋಗಕ್ಕೆ ಹೇಳಲಾಗುತ್ತದೆ. ವಿಜ್ಞಾನದಿಂದ ಮುಕ್ತಿ, ಜ್ಞಾನದಿಂದ ಜೀವನ್ಮುಕ್ತಿ ಪ್ರಾಪ್ತಿ ಆಗುವುದು. ಹೀಗೆ ಜ್ಞಾನ ವಿಜ್ಞಾನ ಭವನದವರಿಗೆ ಈ ತಿಳುವಳಿಕೆ ನೀಡಬೇಕು. ಜ್ಞಾನ ವಿಜ್ಞಾನ ಪ್ರದರ್ಶನ ಮಾಡಬೇಕು. ಅಲ್ಲಿಗೆ ಭಾರತದವರು ಹಾಗೂ ವಿದೇಶ ಮೊದಲಾದವರೆಲ್ಲರೂ ಬಂದು ಈ ಸಹಜ ಯೋಗ ಹಾಗು ಜ್ಞಾನವನ್ನು ತಿಳಿದುಕೊಳ್ಳಬೇಕು. ಮನುಷ್ಯರು ಪರಮಾತ್ಮನನ್ನು ಸರ್ವವ್ಯಾಪಿ ಎಂದು ಕರೆದು ಬಿಟ್ಟಿದ್ದಾರೆ. ಹೇಗೆ ನಾವು ಇದನ್ನು ಸತ್ಯ ಗೀತೆಯೆಂದು ಬರೆಯುತ್ತೇವೆ ಹಾಗೆಯೇ ಇದನ್ನು ಸತ್ಯ ಜ್ಞಾನ-ವಿಜ್ಞಾನ ಭವನವೆಂದು ಬರೆಯಬೇಕು. ಬಾಬಾ ಸಲಹೆ ಕೊಡುತ್ತಾರೆ - ಇದೇ ಸತ್ಯ ಜ್ಞಾನ-ವಿಜ್ಞಾನ ಭವನ ಹಾಗೂ ಪಾಂಡವ ಭವನವೆಂಬ ಹೆಸರನ್ನು ಹಾಕಿ ಬಿಟ್ಟಾಗ ಸ್ಪಷ್ಟವಾಗಿ ಬಿಡುತ್ತದೆ. ಜ್ಞಾನದಿಂದ ಜೀವನ್ಮುಕ್ತಿ, ಸದಾ ಸಂಪತ್ತಿವಾನ್ ಹಾಗು ವಿಜ್ಞಾನ ಅಂದರೆ ಯೋಗದಿಂದ ಸದಾ ಆರೋಗ್ಯವಂತರು ಹೇಗೆ ಆಗುತ್ತೇವೆಂದು ಪ್ರಪಂಚದವರಿಗೆ ತಿಳಿಸಿಕೊಡಬೇಕು. ಇದು ಕೇವಲ ಒಬ್ಬರಿಗೆ ತಿಳಿಸುವ ಮಾತಲ್ಲ. ಮೇಳ, ಪ್ರದರ್ಶನ ಮಾಡಿ, ಆಗ ಸಾವಿರಾರು ಮಕ್ಕಳು ಬಂದು ತಿಳಿದುಕೊಳ್ಳುತ್ತಾರೆ. ಬಾಬಾ ಯುಕ್ತಿ ತಿಳಿಸಿಕೊಡುತ್ತಾರೆ, ಬ್ಯಾನರ್ ಮಾಡಿ ಹಾಕುವುದು ತಡವಾಗಬಾರದು. ನಮ್ಮ ಚಿತ್ರ ಬಹಳ ಚೆನ್ನಾಗಿದೆ. ಯಾವುದೇ ದೇಶ-ವಿದೇಶದವರಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಬಾಬಾ ತಿಳಿಸುತ್ತಾರೆ - ಸೃಷ್ಟಿಚಕ್ರದ ಚಿತ್ರವನ್ನು ದೊಡ್ಡದಾಗಿ ಮಾಡಬೇಕು, ಹಾಗೂ ಅದರ ಪಕ್ಕದಲ್ಲಿ ಮತ್ತೆ ವಿರಾಟ ರೂಪದ ಚಿತ್ರವನ್ನು ತೋರಿಸಬೇಕು. ಶಿವ ತಂದೆಯ ಚಿತ್ರವಲ್ಲದೆ ಜೊತೆಗೆ ತ್ರಿಮೂರ್ತಿಯ ಚಿತ್ರವೂ ಸಹ ಖಂಡಿತವಾಗಿ ಇರಬೇಕು. ಏಕೆಂದರೆ ಬ್ರಹ್ಮನ ಮುಖಾಂತರ ಸ್ಥಾಪನೆಯಾಗುತ್ತದೆಂದು ಸಿದ್ಧ ಮಾಡಬೇಕಾಗುತ್ತದೆ. ಈ ಬ್ರಾಹ್ಮಣರೇ ಪುನರ್ಜನ್ಮದಲ್ಲಿ ಬರುವವರಾಗಿದ್ದಾರೆ. ಬ್ರಾಹ್ಮಣರಿಂದ ದೇವತೆ, ದೇವತೆಯಿಂದ ಕ್ಷತ್ರಿಯ.... ಈ ಒಳ್ಳೆಯ ಚಿತ್ರವನ್ನು ಮಾಡಿ ಸೃಷ್ಟಿಚಕ್ರ ಚಿತ್ರದ ಪಕ್ಕದಲ್ಲಿ ಇಡಬೇಕು. ಆಗ ತಿಳಿಸಿಕೊಡಲು ಸಹಜವಾಗಿ ಬಿಡುತ್ತದೆ. ಈ ಜ್ಞಾನ ಯೋಗದಿಂದ ಸ್ವರ್ಗ ಹೇಗೆ ಆಗುತ್ತದೆ ಎಂದು ತಿಳಿಸಿಕೊಡಬೇಕು. ಪ್ರಜಾಪಿತ ಬ್ರಹ್ಮನ ಮುಖಾಂತರ ಬ್ರಾಹ್ಮಣರು ರಚನೆಯಾಗುತ್ತಾರೆಂದು ತಿಳಿಸಿಕೊಡಲು ಬಹಳ ಯುಕ್ತಿ ಬೇಕು. ಎಲ್ಲರಿಗೂ ನಿಮಂತ್ರಣ ಕಳುಹಿಸಬೇಕು. ಚಿತ್ರಗಳನ್ನು ತಿಳಿಸಿಕೊಡುವುದು ಬಹಳ ಸಹಜ. ಪರಮಪಿತ ಪರಮಾತ್ಮನ ಮುಖಾಂತರ ರಾಜಯೋಗ ಕಲಿತು ಹೊಸ ರಾಜಧಾನಿ ಸ್ಥಾಪನೆ ಆಗುತ್ತಿದೆ. ಇಲ್ಲಿ ಬ್ರಹ್ಮಾಕುಮಾರ-ಕುಮಾರಿಯರು ಕೋಟಿಯಲ್ಲಿ ಕೆಲವರು ಆಗುತ್ತಾರೆ. ಅದರಲ್ಲೂ ಆಶ್ಚರ್ಯವಾಗಿ ನಡೆಯುತ್ತಾರೆ, ಕೇಳುತ್ತಾರೆ ಓಡಿ ಹೋಗುತ್ತಾರೆ. ಇಲ್ಲಿ ಬಡವರೂ ಇದ್ದಾರೆ, ಸಾಹುಕಾರರೂ ಇದ್ದಾರೆ, ಸಾಮಾನ್ಯರೂ ಇದ್ದಾರೆ, ಸಾಹುಕಾರರು ಬೇಗ ಬರುವುದಿಲ್ಲ.

ಬಾಬಾ ತಿಳಿಸಿದ್ದಾರೆ – ಜ್ಞಾನ ಯಜ್ಞದಲ್ಲಿ ಅನೇಕ ಪ್ರಕಾರದ ವಿಘ್ನಗಳಂತೂ ಬರುತ್ತದೆ. ತುಂಬಾ ಅತ್ಯಾಚಾರ ಆಗುತ್ತದೆ. ಕಾಮೇಶು ಕ್ರೋಧೇಶು ಇದೆಯಲ್ಲವೆ. ವಿಕಾರಕ್ಕಾಗಿ ಹೊಡೆಯುತ್ತಾರೆ. ಕನ್ಯೆಯರಿಗೂ ಮದುವೆಗಾಗಿ ತುಂಬಾ ಹಿಂಸೆ ಕೊಡುತ್ತಾರೆ. ತಂದೆಯಂತು ಹೇಳುತ್ತಾರೆ - ಶ್ರೀಮತದನುಸಾರ ನಡೆದರೆ ಶ್ರೇಷ್ಠಾಚಾರಿ ಆಗುತ್ತಾರೆ. ಬಾಬಾ ಬರುತ್ತಾರೆ ಪತಿತ ಭ್ರಷ್ಟಾಚಾರಿ

ಪ್ರಪಂಚದಲ್ಲಿ ಈ ರಾವಣ ರಾಜ್ಯದಲ್ಲಿ ಮೊದಲು ಕಾಮ ಮಹಾ ಶತ್ರುವಾಗಿದೆ. ಶ್ರೇಷ್ಠಾಚಾರಿ ರಾಜ್ಯಕ್ಕೆ ಹೇಳುತ್ತಾರೆ ಸಂಪೂರ್ಣ ನಿರ್ವಿಕಾರಿ. ಅವರಲ್ಲಿ ವಿಕಾರವೇ ಇರುವುದಿಲ್ಲ. ಆದ ಕಾರಣ ಅಲ್ಲಿ ಜನ್ಮ ಹೇಗಾಗುತ್ತದೆ ಎಂಬ ಪ್ರಶ್ನೆಯೇ ಇರುವುದಿಲ್ಲ. ಅದು ರಾಮ ರಾಜ್ಯ ಆಗಿರುವ ಕಾರಣ ವಿಕಾರವಿರುವುದಿಲ್ಲ. ಇದು ರಾವಣ ರಾಜ್ಯ ಆದ ಕಾರಣ ರಾವಣನನ್ನು ಸುಡುತ್ತಾರೆ. ಈ ಸಮಯದಲ್ಲಿ ಶ್ರೇಷ್ಠಾಚಾರಿ ಯಾರೂ ಇಲ್ಲ. ಶ್ರೇಷ್ಠಾಚಾರಿಯನ್ನಾಗಿ ಮಾಡುವುದು-ಒಬ್ಬ ಪರಮಪಿತ ಪರಮಾತ್ಮನ ಕೆಲಸವಾಗಿದೆ. ಸ್ವರ್ಗವಂತೂ ನಿರ್ವಿಕಾರಿ ಪ್ರಪಂಚವಾಗಿದೆ, ಅಲ್ಲಿ ವಿಕಾರ ಇರುವುದಿಲ್ಲ, ಏಕೆಂದರೆ ಅಲ್ಲಿ ರಾವಣ ರಾಜ್ಯ ಇರುವುದಿಲ್ಲ.

ಈಗ ನೀವು ಯೋಗ ಬಲದಿಂದ ರಾಜ್ಯ ತೆಗೆದುಕೊಳ್ಳುತ್ತೀರಿ. ರಾವಣನಂತೂ ಸಮಾಪ್ತಿಯಾಗುತ್ತಾನೆ, ಈಗ ಸಂಗಮಯುಗದಲ್ಲಿ ನೀವು ಸಂಪೂರ್ಣರಾಗುತ್ತಿದ್ದೀರಿ. ಸತ್ಯಯುಗದ ಆದಿಯಲ್ಲಿ ಒಬ್ಬರೂ ವಿಕಾರಿಗಳು ಇರಲು ಸಾಧ್ಯವಿಲ್ಲ . ಸಂಗಮಯುಗದಲ್ಲಿ ಇಬ್ಬರೂ ಇರುತ್ತಾರೆ. ಇದಕ್ಕೆ ಶುದ್ಧ ಹಾಗು ಅಶುದ್ಧ ನೀರಿನ ಸಂಗಮ ಎಂದು ಹೇಳುತ್ತಾರೆ. ಯಾವಾಗ ಶುದ್ಧತೆ ಇರುತ್ತದೆ, ಆಗ ಅಶುದ್ಧತೆ ನೋಡಲೂ ಸಿಗುವುದಿಲ್ಲ. ಈಗ ಪ್ರಪಂಚದ ಸಂಗಮವೂ ಆಗಿದೆ, ಆತ್ಮ ಹಾಗು ಪರಮಾತ್ಮನ ಮಿಲನವೂ ಆಗಿದೆ. ನದಿ ಹಾಗು ಸಾಗರದ ಸಂಗಮ ಪರಂಪರೆಯಿಂದ ನಡೆದುಬಂದಿದೆ. ನದಿ ಸಾಗರವನ್ನು ಸೇರಿದಾಗ ನೀರಿನಲ್ಲಿ ವ್ಯತ್ಯಾಸವಾಗುತ್ತದೆ. ತಂದೆಯ ವಿನಃ ಅನ್ಯ ಯಾರೂ ತ್ರಿಕಾಲದರ್ಶಿ, ತ್ರಿಲೋಕಿನಾಥರನ್ನಾಗಿ ಮಾಡಲು ಸಾಧ್ಯವಿಲ್ಲ. ತ್ರಿಕಾಲದರ್ಶಿ ಹಾಗು ತ್ರಿಲೋಕಿನಾಥರು ಕೇವಲ ನಾವಷ್ಟೇ ಆಗಲು ಸಾಧ್ಯ, ಕೃಷ್ಣನಿಗೂ ಹೇಳಲು ಸಾಧ್ಯವಿಲ್ಲ. ಮೂರೂ ಕಾಲಗಳನ್ನು ತಿಳಿದುಕೊಂಡಿರುವ ಒಬ್ಬರೇ ಶಿವ ತಂದೆ ತ್ರಿಲೋಕಿನಾಥನಾಗಿದ್ದಾರೆ. ತ್ರಿಲೋಕಿನಾಥ, ತ್ರಿಕಾಲದರ್ಶಿಯೆಂದು ಕೇವಲ ಪರಮಪಿತ ಪರಮಾತ್ಮನ ಹೊರತು ಅನ್ಯ ಯಾರಿಗೂ ಹೇಳಲು ಸಾಧ್ಯವಿಲ್ಲ. ಲಕ್ಷ್ಮೀ -ನಾರಾಯಣರಿಗಂತೂ ಮೂರು ಲೋಕ, ಮೂರು ಕಾಲದ ಜ್ಞಾನವಿಲ್ಲ ಹಾಗೂ ಆದಿ, ಮಧ್ಯ, ಅಂತ್ಯದ ಜ್ಞಾನ ಸಹ ಇಲ್ಲ. ಈಗಂತೂ ನಮ್ಮ ಹತ್ತಿರ ಪೂರ್ತಿ ಜ್ಞಾನವಿದೆ, ತ್ರಿಲೋಕದ ಜ್ಞಾನ ಸಹ ನಮ್ಮಲ್ಲಿದೆ. ತಂದೆಯ ಟೈಟಲ್ ಬ್ರಾಹ್ಮಣರಿಗೂ ಸಿಗುತ್ತದೆ, ದೇವತೆಗಳಿಗೂ ಈ ಜ್ಞಾನವಿರುವುದಿಲ್ಲ. ನೀವು ಬಹಳ ಉತ್ತಮರಾಗಿದ್ದೀರಿ, ಯಾವ ಮಕ್ಕಳು ತಮ್ಮನ್ನು ತಾವು ತ್ರಿಲೋಕಿನಾಥ, ತ್ರಿಕಾಲದರ್ಶಿ ಎಂದು ತಿಳಿದುಕೊಳ್ಳುತ್ತಾರೋ ಅವರು ಅನ್ಯರನ್ನೂ ತನ್ನ ಸಮಾನ ಮಾಡುವುದರಲ್ಲಿ ಬಿಜಿ ಆಗಿರುತ್ತಾರೆ. ಜ್ಞಾನ ವಿಜ್ಞಾನದಿಂದ ಆರೋಗ್ಯ ಹಾಗು ಸಂಪತ್ತು ಹೇಗೆ ಸಿಗುತ್ತದೆ ಎಂದು ಪ್ರತಿ ಮನೆಯವರಿಗೂ ನಿಮಂತ್ರಣ ನೀಡಿ ತಿಳಿಸಿಕೊಡಬೇಕು. ದೆಹಲಿಯ ಜ್ಞಾನ ವಿಜ್ಞಾನ ಭವನದಲ್ಲಿ ಈ ವಸ್ತುಗಳಿದ್ದಾಗ ಎಷ್ಟೊಂದು ವಿದೇಶದವರು ಬಂದು ಜ್ಞಾನ ಪಡೆಯಬಹುದು. ಕೊನೆಗೂ ಅಂತ್ಯದ ಸಮಯದಲ್ಲಿ ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ವಿಶ್ವ ಪರಿವರ್ತನೆ ಆಗಲೇಬೇಕು, ವಿನಾಶದ ಮೊದಲು ತಂದೆಯ ನೆನಪಿನಿಂದ ವಿಕರ್ಮ ವಿನಾಶ ಏಕೆ ಮಾಡಿಕೊಳ್ಳಬಾರದು? ಹಾಗೂ ಆತ್ಮ ಎಷ್ಟೆಷ್ಟು ಶುದ್ಧವಾಗುತ್ತಾ ಹೋಗುತ್ತದೆಯೋ ಅಷ್ಟು ಶ್ರೇಷ್ಠ ಪದವಿ ಸಿಗುತ್ತದೆ. ಎಲ್ಲವೂ ಜ್ಞಾನ ವಿಜ್ಞಾನದ ಮೇಲೆ ಆಧಾರವಾಗಿದೆ. ಮುಕ್ತಿ ಧಾಮದಲ್ಲಿ ಇರುವವರು ಯೋಗವನ್ನು ಇಷ್ಟ ಪಡುವರು. ಆ ಆತ್ಮಗಳಲ್ಲಿ ಅದೇ ಪಾತ್ರವಿರುತ್ತದೆ. ಹಾಗೂ ದೇವೀ-ದೇವತಾ ಧರ್ಮದವರು ಜ್ಞಾನ ಇಷ್ಟ ಪಡುತ್ತಾರೆ.

ದಿನ ಪ್ರತಿ ದಿನ ಮಕ್ಕಳ ಉನ್ನತಿ ಆಗುತ್ತಿರುತ್ತದೆ. ನೀವು ಶ್ರೇಷ್ಠರಾಗುತ್ತಾ ಹೋಗುತ್ತೀರಿ, ಉಳಿದವರು ಇನ್ನೂ ಕೆಳಗೆ ಇಳಿಯುತ್ತಾ ಬರುವರು. ನಿಮ್ಮದು ಏರುವ ಕಲೆ ಹಾಗು ಉಳಿದವರೆಲ್ಲರದು ಇಳಿಯುವ ಕಲೆಯಾಗಿದೆ. ಮನೆಗೆ ಹಿಂತಿರುಗುವುದು ಸಾಮಾನ್ಯ ಮಾತಾಗಿದೆ. ಆದರೆ ಆಸ್ತಿ ಪಡೆಯುವುದು ಮುಖ್ಯವಾಗಿದೆ. ಕಲ್ಪದ ಮೊದಲು ಯಾರು ಹೇಗೆ ಪದವಿಯನ್ನು ಪಡೆದುಕೊಂಡಿದ್ದರು ಅವರೆಲ್ಲರೂ ಈಗ ಸಾಕ್ಷಿಗಳಾಗಿ ನೋಡುತ್ತಿದ್ದಾರೆ. ಪದವಿಯನ್ನು ಪಡೆದುಕೊಳ್ಳುವವರು ಬಹಳ ಇದ್ದಾರೆ. ದಿನ ಪ್ರತಿ ದಿನ ಯುಕ್ತಿಗಳು ಬಹಳ ಬರುತ್ತಿವೆ. ಜ್ಞಾನ ವಿಜ್ಞಾನ ಭವನ ಹೆಸರಿನ ಜೊತೆಗೆ ಒಳ್ಳೊಳ್ಳೆಯ ಚಿತ್ರಗಳೂ ಇರಬೇಕು. ಪ್ರಪಂಚದಲ್ಲಿಯಂತು ಬಹಳ ವ್ಯರ್ಥ ಚಿತ್ರಗಳಿವೆ, ಅದರಲ್ಲಿಯೂ ಕೃಷ್ಣನ ಚಿತ್ರಗಳನ್ನು ಅಂಕು-ಡೊಂಕು ಮಾಡಿ ಬಿಟ್ಟಿದ್ದಾರೆ, ನಿಮಗೆ ಅದರ ಅವಶ್ಯಕತೆಯಿಲ್ಲ. ಸ್ವರ್ಗದಲ್ಲಿ ದೇವತೆಗಳು ಖುಷಿಯಿಂದ ನರ್ತಿಸುತ್ತಾರೆ. ಈ ಕಲೆಯಂತೂ ಅಲ್ಲಿನ ಪರಂಪರೆಯಾಗಿದೆ. ಅಲ್ಲಿ ರಾಜಕುಮಾರಿ-ರಾಜಕುಮಾರರು ಖುಷಿಯಿಂದ ಆಡುತ್ತಾರೆ. ಸಿನಿಮಾ ಇತ್ಯಾದಿ ಏನೂ ಅಲ್ಲಿ ಇರುವುದಿಲ್ಲ. ಈ ಎಲ್ಲಾ ಮಾತುಗಳನ್ನು ನೀವು ಇಲ್ಲಿಯೇ ತಿಳಿದುಕೊಂಡಿದ್ದೀರಿ. ತಂದೆಯನ್ನು ನೀವು ಮಾತ್ರ ತಿಳಿದುಕೊಂಡಿದ್ದೀರಿ. ತಂದೆ ಯಾರೆಂದು ಮನುಷ್ಯರ ಬುದ್ಧಿಯಲ್ಲಿ ಕುಳಿತುಕೊಳ್ಳುತ್ತದೆಯೇ? ಏಕೆಂದರೆ ಕೃಷ್ಣನ ಹೆಸರನ್ನು ತಿಳಿದುಕೊಂಡಿದ್ದಾರೆ. ಶ್ರೀಕೃಷ್ಣನ ಚಿತ್ರವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಶ್ರೀಕೃಷ್ಣನನ್ನು ಶ್ಯಾಮ ಸುಂದರ ಎಂದು ಕರೆಯುತ್ತಾರೆ. ಕಾಮ ಚಿತೆಯ ಮೇಲೆ ಕುಳಿತಾಗ ಕಪ್ಪಾಗಿ ಬಿಡುತ್ತೀರಿ. ಜ್ಞಾನಚಿತೆಯ ಮೇಲೆ ಕುಳಿತಾಗ ಅರ್ಧಕಲ್ಪಕ್ಕೆ ಸುಂದರರಾಗಿ ಬಿಡುತ್ತೀರಿ. ಇದು ಸದಾ ಬುದ್ಧಿಯಲ್ಲಿ ಇರಬೇಕು - ನಾವು 21 ಜನ್ಮಗಳಿಗೆ ಸುಂದರರಾಗುತ್ತೇವೆ. ನಂತರ ಕಾಮ ಚಿತೆಯ ಮೇಲೆ ಕುಳಿತು ಭಿನ್ನ-ಭಿನ್ನ ನಾಮ ರೂಪದಲ್ಲಿ ಬಂದು ಕಪ್ಪಾಗಿ ಬಿಡುತ್ತೀರಿ. ಪ್ರಪಂಚದವರು ಗೊತ್ತಿಲ್ಲದೆ ಕೃಷ್ಣನನ್ನು ಕಪ್ಪಾಗಿ ತೋರಿಸಿ ಬಿಟ್ಟಿದ್ದಾರೆ. ಅವರಿಗೆ ಹೇಗೆ ತಿಳಿಸಬೇಕೆಂದು ನಿಮಗೆ ತಿಳಿದಿದೆ. ಯಾರ ಚಿತ್ರವನ್ನು ಕೊಡಬೇಕು, ಶ್ಯಾಮ ಹಾಗೂ ಸುಂದರ ಎಂದು ಇವರಿಗೇ ಹೇಳಬೇಕು ಎಂದು ಇತ್ಯಾದಿಯಾಗಿ ತಿಳಿಸಿ ಕೊಡಬೇಕು. ರಾಮ ಚಂದ್ರನನ್ನು ಶ್ಯಾಮ-ಸುಂದರ ಎಂದು ಕರೆಯಲಾಗುವುದಿಲ್ಲ. ಕೃಷ್ಣನನ್ನು ಶ್ಯಾಮ ಎಂದು ಏಕೆ ಹೇಳುತ್ತಾರೆಂದು ತಿಳಿದುಕೊಂಡಿಲ್ಲ. ಈ ಸಮಯದಲ್ಲಿ ಎಲ್ಲರೂ ಬಹಳ ಕಪ್ಪಾಗಿ ಬಿಟ್ಟಿದ್ದಾರೆ. ಇದು ತಿಳಿದುಕೊಳ್ಳುವ ಮಾತಾಗಿದೆ. ಆದರೆ ಒಳ್ಳೆಯ ರೀತಿಯಲ್ಲಿ ತಿಳಿದುಕೊಳ್ಳಬೇಕು. ಪ್ರದರ್ಶನಗಳಲ್ಲಿ ಕಲಿಯುವ ಅವಕಾಶ ಬಹಳವಿದೆ, ಒಳ್ಳೊಳ್ಳೆಯ ಮಕ್ಕಳು ಮೈದಾನದಲ್ಲಿ ಬರುತ್ತಾರೆ. ಅನ್ಯರು ಇನ್ನೂ ಕಲಿಯುತ್ತಾರೆ. ನಿಮಂತ್ರಣವನ್ನು ಎಲ್ಲರಿಗೂ ಕೊಡಬೇಕು. ಒಂದುವೇಳೆ

ಯಾರಾದರೂ ನಿಂದನೆ ಮಾಡಲಿ ಬಿಡಲಿ. ನಿಂದನೆಯಂತೂ ಸಂಗಮಯುಗದಲ್ಲಿ ಇದ್ದೇ ಇರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಶ್ರೀಮತದಲ್ಲಿ ನಡೆಯುತ್ತ ಶ್ರೇಷ್ಠಾಚಾರಿಗಳು ಆಗಬೇಕು. ಕಾಮ ಮಹಾ ಶತ್ರುವಿನ ಮೇಲೆ ವಿಜಯಿಗಳಾಗಿ ಸಂಪೂರ್ಣ ನಿರ್ವಿಕಾರಿಗಳಾಗಬೇಕು. ಅತ್ಯಾಚಾರಗಳಿಗೆ ಹೆದರಬಾರದು.

2. ಯೋಗಬಲದಿಂದ ಆತ್ಮಗಳನ್ನು ಶುದ್ಧ ಮಾಡಬೇಕು. ತ್ರಿಕಾಲದರ್ಶಿ, ತ್ರಿಲೋಕಿನಾಥರಾಗಿ ಅನ್ಯರನ್ನು ತನ್ನ ಸಮಾನ ಮಾಡಿಕೊಳ್ಳುವ ಸೇವೆಯಲ್ಲಿ ವ್ಯಸ್ತರಾಗಿರಬೇಕು. ಎಲ್ಲ ಧರ್ಮದವರಿಗೆ ಅಗತ್ಯವಾಗಿ ಸಂದೇಶವನ್ನು ಕೊಡಬೇಕು.

ವರದಾನ: ಸ್ನೇಹದ ರಿಟರ್ನ್‌ನಲ್ಲಿ ಸ್ವಯಂನ್ನು ಟರ್ನ್ ಮಾಡಿಕೊಳ್ಳುವಂತಹ ಸತ್ಯ ಸ್ನೇಹಿಯಿಂದ ಸಮಾನ ಭವ.

ತಂದೆಗೆ ಮಕ್ಕಳೊಂದಿಗೆ ಅತ್ಯಂತ ಸ್ನೇಹವಿದೆ ಆದ್ದರಿಂದ ಸ್ನೇಹಿಯ ಕೊರತೆಯನ್ನು ನೋಡಲು ಸಾಧ್ಯವಾಗುವುದಿಲ್ಲ. ತಂದೆಯು ಮಕ್ಕಳನ್ನು ತನ್ನ ಸಮಾನ ಸಂಪನ್ನ ಹಾಗೂ ಸಂಪೂರ್ಣರನ್ನಾಗಿ ನೋಡಲು ಬಯಸುತ್ತಾರೆ. ತಾವು ಮಕ್ಕಳೂ ಸಹ ಇದೇರೀತಿ ಹೇಳುತ್ತೀರಿ - ಬಾಬಾರವರಿಗೆ ಸ್ನೇಹದ ರಿಟರ್ನ್‌ನಲ್ಲಿ ನಾವು ಏನು ಕೊಡುವುದು? ಅಂದಮೇಲೆ ತಂದೆಯು ಮಕ್ಕಳಿಂದ ಇದೇ ರಿಟರ್ನ್ ಬಯಸುತ್ತಾರೆ - ಸ್ವಯಂನ್ನು ರಿಟರ್ನ್ (ಪರಿವರ್ತನೆ) ಮಾಡಿಕೊಂಡು ಬಿಡಿ. ಸ್ನೇಹದಲ್ಲಿ ಬಲಹೀನತೆಗಳ ತ್ಯಾಗ ಮಾಡಿ ಬಿಡಿ. ಭಕ್ತರಂತು ತಲೆಯನ್ನೇ ತುಂಡರಿಸಿಡುವುದಕ್ಕೆ ತಯಾರಾಗಿ ಬಿಡುತ್ತಾರೆ. ತಾವು ಶರೀರದ ತಲೆಯನ್ನಲ್ಲ ಆದರೆ ರಾವಣನ ತಲೆಯನ್ನು ಇಟ್ಟು ಬಿಡಿ, ಸ್ವಲ್ಪವೂ ಬಲಹೀನತೆಗಳ ತಲೆಯನ್ನಿಟ್ಟುಕೊಳ್ಳಬಾರದು.

ಸ್ಲೋಗನ್: ಪ್ರತಿಯೊಂದು ಕರ್ಮ ಮಾಡುತ್ತಾ ಸಾಕ್ಷಿ ಸ್ಥಿತಿಯಲ್ಲಿ ಇರುತ್ತೀರೆಂದರೆ ತಂದೆಯು ತಮ್ಮ ಜೊತೆಗಾರ ಆಗಿ ಬಿಡುವರು.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ – "ಸಂಪೂರ್ಣ ಪುರುಷಾರ್ಥ ಸಿದ್ಧಿಯಲ್ಲಿ 21 ಜನ್ಮಗಳ ಸುಖದ ಪ್ರಾಲಬ್ಧ"

ನೋಡಿ, ಪರಮಾತ್ಮನ ಜೊತೆ ಇಷ್ಟು ಸಂಪೂರ್ಣ ಸಂಬಂಧವನ್ನು ಜೋಡಿಸಬೇಕು, ಅದರಿಂದ 21 ಜನ್ಮಗಳಿಗಾಗಿ ಸುಖದ ಪ್ರಾಪ್ತಿಯಾಗಿ ಬಿಡಲಿ. ಇದಾಗಿದೆ ಪುರುಷಾರ್ಥದ ಸಿದ್ಧಿ ಆದರೆ 21 ಜನ್ಮಗಳ ಹೆಸರು ಕೇಳುತ್ತಿದ್ದಂತೆಯೇ ತಣ್ಣಗಾಗಿ ಬಿಡಬಾರದು, 21 ಜನ್ಮಗಳಿಗಾಗಿ ಇದೇ ಸಮಯದಲ್ಲಿ ಪುರುಷಾರ್ಥವನ್ನೂ ಅಷ್ಟೇ ಮಾಡಬೇಕು, ಆಮೇಲೆ 21 ಜನ್ಮಗಳ ನಂತರ ಬೀಳಲೇಬೇಕು ಅಂದಮೇಲೆ ಸಿದ್ಧಿ ಏನಾಯಿತು? ಆದರೆ ಡ್ರಾಮಾದಲ್ಲಿ ಆತ್ಮರುಗಳಲ್ಲಿ ಸರ್ವೋತ್ತಮ ಸಿದ್ಧಿಯು ಎಷ್ಟು ನಿಗಧಿಯಾಗಿದೆಯೋ ಅಷ್ಟಂತು ಸಿಗುತ್ತದೆಯಲ್ಲವೆ? ತಂದೆಯಂತು ಬಂದು ನಮ್ಮನ್ನು ಸಂಪೂರ್ಣ ಸ್ಥಿತಿಯಲ್ಲಿ ತಲುಪಿಸಿ ಬಿಡುತ್ತಾರೆ. ಆದರೆ ನಾವು ಮಕ್ಕಳು ತಂದೆಯನ್ನೇ ಮರೆಯುತ್ತೇವೆಂದರೆ ಅವಶ್ಯವಾಗಿ ಬೀಳುತ್ತೇವೆ, ಇದರಲ್ಲಿ ತಂದೆಯ ಯಾವುದೇ ದೋಷವಿಲ್ಲ. ಈಗ ನಾವು ಮಕ್ಕಳಲ್ಲಿ ಕೊರತೆಯಾಗುತ್ತದೆ ಎಂದರೆ, ಅದು ಸತ್ಯಯುಗ-ತ್ರೇತಾದ ಸಂಪೂರ್ಣ ಸುಖವು, ಈ ಜನ್ಮದ ಪುರುಷಾರ್ಥದ ಮೇಲೆ ಆಧಾರಿತವಾಗುತ್ತದೆ, ಅಂದಮೇಲೆ ನಾವೇಕೆ ಸಂಪೂರ್ಣ ಪುರುಷಾರ್ಥ ಮಾಡುತ್ತಾ ಸರ್ವೋತ್ತಮ ಪಾತ್ರವನ್ನು ಅಭಿನಯಿಸಬಾರದು! ಇನ್ನೂ ಬಹಳ ಚೆನ್ನಾಗಿ ಪುರುಷಾರ್ಥ ಮಾಡುತ್ತಾ ಸಂಪೂರ್ಣವಾಗಿ ಆಸ್ತಿಯನ್ನು ತೆಗೆದುಕೊಳ್ಳೋಣ. ಮನುಷ್ಯನು ಸದಾ ಸುಖಕ್ಕಾಗಿಯೇ ಪುರುಷಾರ್ಥ ಮಾಡುವನು, ಸುಖ-ದುಃಖದಿಂದ ಭಿನ್ನವಾಗುವುದಕ್ಕಾಗಿ ಯಾವುದೇ ಪುರುಷಾರ್ಥ ಮಾಡುವುದಿಲ್ಲ. ಅಂದಮೇಲೆ ಡ್ರಾಮಾದ ಅಂತ್ಯದಲ್ಲಿ ಪರಮಾತ್ಮನು ಬಂದು ಸರ್ವ ಆತ್ಮರಿಗೆ ಶಿಕ್ಷೆ ಕೊಟ್ಟು ಪವಿತ್ರರನ್ನಾಗಿ ಮಾಡಿ, ಪಾತ್ರದಿಂದ ಮುಕ್ತಗೊಳಿಸುತ್ತಾರೆ, ಇದು ಪರಮಾತ್ಮನ ಕಾರ್ಯವಾಗಿದೆ. ಅವರು ತನ್ನ ನಿಗಧಿಯಾಗಿರುವ ಸಮಯದಲ್ಲಿ ತಾನಾಗಿಯೇ ಬಂದು ತಿಳಿಸುತ್ತಾರೆ. ಈಗ ಅಂದರೆ ಯಾವಾಗ ಆತ್ಮರು ಪುನಃ ಪಾತ್ರದಲ್ಲಿ ಬರಲೇಬೇಕಾಗುತ್ತದೆ ಅಂದಮೇಲೆ ಒಳ್ಳೆಯ ಪುರುಷಾರ್ಥ ಮಾಡಿ ಸರ್ವೋತ್ತಮ ಪಾತ್ರವನ್ನೇಕೆ ಅಭಿನಯಿಸಬಾರದು!! ಒಳ್ಳೆಯದು. ಓಂ ಶಾಂತಿ.